ಹರವಿಕೊಂಡು, ಎಳೆ ಬಿಸಿಲ ಝುಳಕ್ಕೆ ಒಣಗುತ್ತಿದ್ದ ಮೀನುಗಳ ಮೈಯಾವಿಯ ವಾಸನೆ ಹೀರುತ್ತ ಕುಳಿತಿದ್ದಳು ಸುಕ್ಕರಿ. ಅವಳ ಎಣ್ಣೆ ಮೆತ್ತಿದ ತಲೆಯನ್ನು ಹೇನು ಹಣಿಗೆಯಿಂದ ಬಾಚುತ್ತ ಸಿಕ್ಕ ಹೇನು, ಸೀರುಗಳನ್ನೆಲ್ಲ ಹೆಕ್ಕಿ ಚಟ್ ಎಂದು ಲಕ್ಷ್ಮಿ ವರೆದಾಗ ಸುಕ್ಕರಿಯ ಮುಖದಲ್ಲಿ ಏಳುತ್ತಿದ್ದ ನೆಮ್ಮದಿ ಯಾವ ಐಸಿರಿಗೂ ಕಮ್ಮಿಯಿರಲಿಲ್ಲ.

ಅಭಾಸವೆನಿಸಿದರೂ ಮೀನು ಮಾರಲು ಕುಳಿತಾಗ, ಮಲಗಿದಾಗ, ಅಡ್ಡಾದಿಡ್ಡಿ ಬೆಳೆದ ಹಲ್ಲುಗಳ ನಡುವೆ ಸಿಕ್ಕಿಕೊಂಡ ಬಂಗಡೆಯ ತುಣುಕನ್ನು ತೆಗೆಯುವಾಗ, ಸೀರೆಯ ಸೆರಗಂಚನ್ನು ಸಣ್ಣಕ್ಕೆ ಮುದ್ದೆ ಕಟ್ಟಿ ಕಿವಿಯೊಳಗೆ ಗಿಡಿದುಕೊಂಡು ಗಲಗಲ ಅಲುಗಿಸುತ್ತ ನೆಮ್ಮದಿಯ ಉತ್ತುಂಗದಲ್ಲಿರುವಾಗ ಗಿಬಿಗಿಬಿ ಗಿಬಿದುಕೊಳ್ಳುವಷ್ಟು ತಲೆಯ ಹೇನುಗಳು ದಾಂದಲೆ ಎಬ್ಬಿಸಿ ಕೋಟಲೆ ಕೊಟ್ಟಿದ್ದಕ್ಕೆ ಚಟ್ ಎಂದು ಹೇನು ವರೆಯುವ ಶಬ್ದ ಸುಕ್ಕರಿಗೆ ಅಗಾಧ ಶಾಂತಿಯನ್ನು ಕೊಡುತ್ತಿತ್ತು.

ಹಬ್ಬ ಬಂತೆಂದರೆ ಊರಿಗೆ ತೋರಣ ಕಟ್ಟುತ್ತ, ಓಸಿ ಜುಗಾರು ಎಂದು ಗೆಳೆಯರೊಂದಿಗೆ ಶರಾಬು ಕಟ್ಟೆಯಲ್ಲಿ ದಿನದೂಡುವ ಮಹೇಶನೆಂಬ ಮಗನೊಬ್ಬ ಸುಕ್ಕರಿಗೆ ಹುಟ್ಟಿದ್ದ. ಸುಕ್ಕರಿಯ ಹೆಣಕ್ಕೆ ಕೊಳ್ಳಿ ಇಡುವವರು ಯಾರಾಗಿರಬಹುದೆಂಬ ದಿಕ್ಕರಿಯದ ಪ್ರಶ್ನೆಗೆ ಸುಕ್ಕರಿಗೆ ಇನ್ನೇನು ಮುಟ್ಟು ನಿಂತೇ ಹೋಯ್ತು ಎಂಬ ದಿನದಲ್ಲಿ ಮಹೇಶ ಹುಟ್ಟಿ ಅಚ್ಚರಿ ಮೂಡಿಸಿದ್ದ. ಅಂಥಾ ಅಪರೂಪದ ಮಗನನ್ನು ಸುಕ್ಕರಿ ತನ್ನ ತಲೆಯ ಮೇಲಿಟ್ಟು ಓಡಾಡದಿದ್ದರೇನು ಕಮ್ಮತ್ತು! ಅವಳು ಮಗನನ್ನು ಹೊತ್ತು ಕುಣಿದೇ ಕುಣಿದಳು. ಮಗನ ಧ್ವನಿ ಒಡೆಯುವ ಮುಂಚೆಯೇ ಮುದುಕಿಯಾದ

